ಕಾಮಗಾರಿಯನ್ನು ಜಾಗ್ರತೆ ಪೂರೈಸುವುದಕ್ಕಾಗದೆ ಇರುವುದರಿಂದ ಈ ವರ್ಷವೇ ಅದನ್ನು ಮಂಜೂರು ಮಾಡಿ ಕಾಮಗಾರಿಯನ್ನು ಕಾರ್ಯಗತ ಮಾಡುವುದಕ್ಕೆ ಪ್ರಯತ್ನ ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—Superintending Office ನಲ್ಲಿ Estimate ಪರಿಶೀಲನೆ ಮಾಡುತ್ತಿದ್ದಾರೆ. ಅದು ಬಂದನಂತರ ತಮ್ಮ ಸಲಹೆಯನ್ನು ಸರ್ಕಾರದವರು ಸಹಾನುಭೂತಿಯಿಂದ ಪರಿಶೀಲನೆ ಮಾಡುತ್ತಾರೆ.

Establishment Clerk, Revenue Commissioner's Office (Complaints against).

Q.—762. **Sri G. PUTTASWAMY** (Chikmagalur-Mudigere—Scheduled Castes).—

Will the Government be pleased to state :—

(*a*) the name of the Establishment Clerk in the Office of the Revenue Commissioner and since how long he is working;

(*b*) whether there are any complaints against this official ?

A.—**Sri Kadidal MANJAPPA** (Minister for Revenue and Public Works).—

(*a*) There are four officials working in the Establishment Section of the Revenue Commissioner's Office.

Their names are—

1 Sri C. Narasimhamurthy
2 ,, R. L. Narasimha Setty
3 ,, H. K. Chikkahanumanthaiah
4 ,, M. Nanjundaiah

(*b*) None.

ಶ್ರೀ ಜಿ. ಪುಟ್ಟಸ್ವಾಮಿ.—ಈ ನೌಕರರು ಎಷ್ಟು ಕಾಲದಿಂದ ನದರಿ ಆಫೀಸಿನಲ್ಲಿ ಕೆಲಸಮಾಡುತ್ತಿದ್ದಾರೆಂಬುದನ್ನು ತಿಳಿಸುತ್ತೀರಾ ?

Sri Kadidal MANJAPPA.—I request the Hon'ble Speaker to take up this question some time later because I had not noticed that the Revenue Commissioner had not furnished the answer for this point.

Mr. SPEAKER.—It will be taken up on some other day ; say on Monday.

Bridge on Varada River near Anavatti (Construction).

Q.—876. **Sri MALLIKARJUNAPPA GOWDA** (Sorab-Shikaripur).—

Will the Government be pleased to state :—

(*a*) since when the Governments of Mysore and Bombay have been considering the question of the construction of a bridge to the Varada River near Anavatti-Hanagal Road, Sorab Taluk ;

(*b*) the places inspected in this behalf ;

(*c*) the amount of estimates in the several places ;

(*d*) when they propose to construct this bridge ?

A.—**Sri Kadidal MANJAPPA** (Minister for Revenue and Public Works).—

(*a*) Since October 1946.

(*b*) One site near Gondi on Anavatti-Hanagal Road.

(*c*) Rs. 16·5 lakhs for a bridge near Gondi.

(*d*) The Government of Bombay have proposed an alternative site near Mavinahole and this will have to be investigated. The work will be taken up as soon as the site for the bridge is fixed and the estimate receives sanction.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಈ ಸೇತುವೆ ಬಹಳ ಪ್ರಾಮುಖ್ಯವಾದುದೆಂದು ಭಾವಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಅದು ಬಹಳ ಪ್ರಾಮುಖ್ಯವಾದುದು. ಈ ಸೇತುವೆಗೆ ತಗಲಬಹುದಾದ ಖರ್ಚಿನಲ್ಲಿ ಅರ್ಧಭಾಗವನ್ನು ಬೊಂಬಾಯಿ ಸರ್ಕಾರದವರು ಕೊಡುತ್ತೇವೆಂದು ಒಪ್ಪಿಕೊಂಡಿದ್ದಾರೆ. ನಮ್ಮ ಸರ್ಕಾರದವರು 16·5 ಲಕ್ಷಕ್ಕೆ ಒಂದು ಯೋಜನೆಯನ್ನು ತಯಾರು ಮಾಡಿ ಬೊಂಬಾಯಿ ಸರ್ಕಾರಕ್ಕೆ ಕಳುಹಿಸಿಕೊಟ್ಟರು. ಬೊಂಬಾಯಿ ಸರ್ಕಾರದವರು ಬೇರೆ ಒಂದು ಸೈಟನ್ನು ಸೂಚಿಸಿದ್ದಾರೆ. ಪುನಃ ಅವರಿಗೆ ಈ ವಿಚಾರಕ್ಕೆ ಸಂಬಂಧಪಟ್ಟ ರಿಕಾರ್ಡನ್ನು ಕಳುಹಿಸಿ ಕೊಡಲಾಗಿದೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ತ್ತಾ ವೆ ರ್ನೋ ಸೈಟ್ select ಮಾಡಬೇಕು ಎಂದು ಹೇಳಿದ್ದೀರಿ. ಅವರು ಅದನ್ನು ಒಪ್ಪಿಕೊಂಡಿದ್ದಾರೆಯೇ ?

ಶ್ರೀ ಕಡಿದಾಳ್ ಮಂಜಪ್ಪ.—ಅವನ್ನು ಇಬ್ಬರೂ investigate ಮಾಡುವುದಕ್ಕೋಸ್ಕರ ಅವರನ್ನು ಕೇಳಿಕೊಂಡಿದ್ದೇವೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಆ ಸೈಟನ್ನು ತಾವೂ ಆ ಸರ್ಕಾರದವರೂ ಸೇರಿ joint inspection ಮಾಡಿ ಒಂದು ನಿರ್ಧಾರಕ್ಕೆ ಬರುವುದು ಒಳ್ಳೆಯದಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ನಮ್ಮ ಇಂಜಿನಿಯರುಗಳು ಮತ್ತು ಅವರ ಕಡೆಯ ಇಂಜಿನಿಯರುಗಳು ಸೇರಿ joint inspection ಮಾಡುತ್ತಾರೆ. ಸೇತುವೆಯನ್ನು ಕಟ್ಟಲು ಮಾವಿನ ಹೊಳೆ ಹತ್ತಿರ ಸರಿಯಾದ ಸೈಟು ಇದೆಯೆಂದು ಅವರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಮಲ್ಲಿಕಾರ್ಜುನಪ್ಪಗೌಡ.—ಮೊದಲು ಇದನ್ನು ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ಇದು ನಮ್ಮ ಸರ್ಕಾರ ಮಾತ್ರ ತೀರ್ಮಾನ ಮಾಡುವ ಹಾಗಿಲ್ಲ, ಬೊಂಬಾಯಿ ಸರ್ಕಾರದವರೂ ಒಪ್ಪಬೇಕು.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈ ಸೇತುವೆ ಪ್ರಾಮುಖ್ಯವಾದುದೆಂಬುದು ಮಾರಾಮತ್ತು ಇಲಾಖೆಯವರಿಗೆ ಗೊತ್ತಿಲ್ಲವೆ ?

ಶ್ರೀ ಕಡಿದಾಳ್ ಮಂಜಪ್ಪ.—ಗೊತ್ತಿದೆ.

Channel from Garudachala river to feed Thogarighatta and Chikkanahalli Tanks of Holavanahalli Hobli.

Q.—909. **Sri MUDDURAMIAH** (Koratagere-Madhugiri).—

Will the Government be pleased to state.—

(*a*) whether an estimate has been prepared for digging a channel from the river Garudachala near Shakunithimmanahalli to feed the Thogarighatta and Chikkanahalli tanks of Holavanahalli Hobli of Koratagere Taluk ;

(*b*) if so, the amount of the estimate ?

A.—**Sri Kadidal MANJAPPA** (Minister for Revenue and Public Works).—

(*a*) No.

(*b*) Does not arise in view of answer to (*a*).

ಶ್ರೀ ಮುದ್ದುರಾಮಯ್ಯ.—ಕಳೆದ ಅಧಿವೇಶನದಲ್ಲಿ ಇದೇ ತರಹ ಪ್ರಶ್ನೆ ನಾನು ಹಾಕಿದಾಗ ಪರಿಶೀಲಿಸುತ್ತೇವೆಂದು ಹೇಳಿತ್ತು. ಹಾಗೆ ಪರಿಶೀಲಿಸಲು ಎಷ್ಟು ಕಾಲ ಬೇಕಾಗುತ್ತದೆ ?

ಶ್ರೀ ಕಡಿದಾಳ್ ಮಂಜಪ್ಪ.—ಇದನ್ನು ಪರಿಶೀಲನೆ ಮಾಡಿದ್ದಾರೆ. ಎಸ್ಟಿಮೇಟ್ ಮಾಡಿ ಪರಿಶೀಲಿಸಿದ್ದರಲ್ಲ ಇದನ್ನು ತೆಗೆದುಕೊಳ್ಳಲು ಸಾಧ್ಯವಾಗುವುದಿಲ್ಲವೆಂದು ತಜ್ಞರು ಅಭಿಪ್ರಾಯ ಪಟ್ಟಿದ್ದಾರೆ.

ಶ್ರೀ ಮುದ್ದುರಾಮಯ್ಯ.—ನಾನು ಕೇಳಿರುವ ಪ್ರದೇಶದಿಂದ ಪರಿಶೀಲನೆ ನಡೆಸಿಲ್ಲ, ಬೇರೆ ಕಡೆಯಿಂದ ಪರಿಶೀಲಿಸಿ ಇದು ಆಗುವುದಿಲ್ಲವೆಂದು ಅಭಿಪ್ರಾಯ ಪಟ್ಟಿದ್ದಾರೆ ಎಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಕಡಿದಾಳ್ ಮಂಜಪ್ಪ.—ಬಂದಿಲ್ಲ.

ಶ್ರೀ ಮುದ್ದುರಾಮಯ್ಯ.—ನಾನು ಕೇಳಿರುವ ಪ್ರದೇಶದಿಂದ ಪರಿಶೀಲಿಸಲು ತಾವು ಏರ್ಪಾಡು ಮಾಡುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ತಾವು ಪ್ರಶ್ನೆಯಲ್ಲಿ ಯಾವ ಪ್ರದೇಶವನ್ನು ನಮೂದು ಮಾಡಿದ್ದೀರೋ ಅದೇ ಪ್ರದೇಶದಿಂದ ಪರಿಶೀಲಿಸಿದ್ದಾರೆಂದು ಸರ್ಕಾರಕ್ಕೆ ವರದಿ ಬಂದಿದೆ.

ಶ್ರೀ ಮುದ್ದುರಾಮಯ್ಯ.—ಆ ರೀತಿ ಆಗಿಲ್ಲ ಎಂಬುದು ನನಗೆ ಗೊತ್ತಿದೆ. ಆದ್ದರಿಂದ ಮತ್ತೊಮ್ಮೆ ಪರಿಶೀಲನೆಯ ಅವಕಾಶ ಕಲ್ಪಿಸುತ್ತೀರಾ ?

ಶ್ರೀ ಕಡಿದಾಳ್ ಮಂಜಪ್ಪ.—ನನಗೆ ವಿವರಗಳನ್ನು ತಾವು ಪತ್ರ ಬರೆದು ತಿಳಿಸಿದರೆ ಪುನಃ ಪರಿಶೀಲಿಸುತ್ತೇನೆ.

Deputy Trade Agent in London.

Q.—734. **Sri M. CHIKKALINGIAH** (Malavalli—Scheduled Castes).—

Will the Government be pleased to state.—

(*a*) whether there was a vacancy in the office of the Deputy Trade Agent in London ;

(*b*) if so, whether the same has been filled up and by whom ?

A.—**Sri H. SIDDAVEERAPPA** (Minister for Home and Industries).—

(*a*) and (*b*) Consequent on the retirement of Sri R. K. Murthy with effect from 31st December 1954, the post of Deputy Trade Agent became vacant. It is not proposed to continue this post. Instead, the post of a Manager for the Trade Agent's Office has been sanctioned on a remuneration of £ 550 per annum for a period of two years and Sri M. Ramachandra Rao, M.A., has been appointed to this newly created post.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡೆಪ್ಯುಟಿ ಟ್ರೇಡ್ ಏಜೆಂಟರು ಹಿಂದೆ ಯಾರಿದ್ದರೋ ಅವರ ಸಂಬಳವೇನು ?

ಶ್ರೀ ಎಚ್. ಸಿದ್ದವೀರಪ್ಪ.—750 ಪೌಂಡುಗಳು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಈಗ ಕಡಮೆ ಮಾಡಿರುವುದರಿಂದ ಆ ಜಾಗಕ್ಕೆ ಹೋಗುವವರಿಗೆ ಸ್ವಲ್ಪ ಡಿಸ್‌ಕರೇಜ್‌ಮೆಂಟ್ ಆಗಿ ದಕ್ಷತೆ ಕಡಮೆಯಾಗುತ್ತದೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಎಚ್. ಸಿದ್ದವೀರಪ್ಪ.—ಈಗ ಡೆಪ್ಯುಟಿ ಟ್ರೇಡ್ ಏಜೆಂಟರಿಗೆ ಬದಲಾಗಿ ಒಬ್ಬ ಮ್ಯಾನೇಜರನ್ನು ನೇಮಿಸಲಾಗಿದೆ. ಹಿಂದೆ ಇದ್ದವರು 20-30 ವರ್ಷ ಆ ಸಂಸ್ಥೆಯಲ್ಲಿ ದುಡಿದಿದ್ದರಿಂದ ಅವರಿಗಾಗಿ ಸ್ಪೆಷಲ್ಲಾಗಿ ಡೆಪ್ಯುಟಿ ಟ್ರೇಡ್ ಏಜೆಂಟರ ಹುದ್ದೆಯನ್ನು ಎರಡು ವರ್ಷಕ್ಕೆ ಮಾತ್ರ ಕ್ರಿಯೇಟ್ ಮಾಡಿದ್ದೆವು.

ಶ್ರೀ ಎಂ. ಚಿಕ್ಕಲಿಂಗಯ್ಯ.—ರಾಮಚಂದ್ರರಾಯರು ಇಂಡಸ್ಟ್ರೀಸ್ ಇಲಾಖೆಯಲ್ಲಿದ್ದವರೆ ಅಥವಾ ಹೊರಗಡೆಯಿಂದ ಕರೆಸಲ್ಪಟ್ಟವರೆ ?

ಶ್ರೀ ಎಚ್. ಸಿದ್ದವೀರಪ್ಪ.—ಇದುವರೆಗೆ ಅವರು ಸರ್ಕಾರದ ಇಲಾಖೆಯಲ್ಲಿರಲಿಲ್ಲ.

ಶ್ರೀ ಎಂ. ಚಿಕ್ಕಲಿಂಗಯ್ಯ.—ಅವರು ಇಂಡಸ್ಟ್ರಿಯಲ್ ಇಲಾಖೆಯಲ್ಲಿಲ್ಲದಿರುವಾಗ ಈ ಕೆಲಸಕ್ಕೆ ಅವರನ್ನು ಯಾವ ಆಧಾರದ ಮೇಲೆ ನೇಮಿಸಿಕೊಂಡಿರಿ ?